ಹಾಕ್ಲಿಲ್ಲ . ಯಾಸಟ್ಗೆ ತುಮಕೂರ್ ಗಿಮಕೂರ್‌ಗೆ ಹೋದ್ರೆ ಮೆಟ್ಟಂಗ್ಡೀಲಿ ಒಂದ್ ಜೊತೆ ಶೋಕಿ ಮೆಟ್ಟು ಕೊಂಡ್ ಕೊಂಡು ಬಾ...' ಎಂದಿದ್ದ. ಗೌಡ 'ಊನೇಳಲೇ.. ಅಂಗ್ಡೀಲಿ ತಂದ ಮೆಟ್ಟು ನಮ್ಮ ಕಲ್ಲು , ಮುಳ್ಗೆ ಒಂದಿನುಕ್ಕಾದ್ರೂ ಬಾಳ್ಕೆ ಬಂದವೇನ್ಲಾ... ಬ್ಯಾಲ್ಯದಾಗೆ ಯಾರತ್ರನಾದ್ರೂ ಒಂದ್ ಜೊತೆ ಮೆಟ್ಟಾಗೊವಷ್ಟು ಚರ್ಮ ಬದ್ಲಿಸ್ಕಂಡ್ ಬಂದು ಟೈಮಿಗೆ ಸರಿಯಾಗಿ ಹೊಲ್ದ್ ಕೊಡು, ಅವ್ಲಾರ ತೋರಿಸ್ಬೇಡ...' ಎಂದು ಅಂಗಿ ಜೇಬಿನಿಂದ ಐವತ್ತು ರೂಪಾಯಿ ತೆಗೆದು ನರಸನ ಕೈಗಿಟ್ಟಿದ್ದ.

ನರಸ, 'ಯಪ್ಪೊ ಈ ಐವೊತ್ತು ಒಂದ್ ಮೆಟ್ ಚರ್ಮುಕ್ಕೂ ಸಾಕಾಗಲ್ಲ, ಇನ್ನೊಂದು ನೂರು ಕೊಡಪ್ಪ' ಎಂದ. ಗೌಡ, 'ಮೆಟ್ಟು ಹೊಲ್ದ್ ತಂದಾಗ ಕೊಡ್ತೀನಿ ಹೋಗ್ಲಾ...' ಎಂದು ಗದರಿದ. ನರಸನು ಗೌಡ ಮದುವೆಗೆ ಹೊರಡುವ ಹಿಂದಿನ ದಿನ ರಾತ್ರಿ ಮೆಟ್ಟನ್ನು ತಂದ. ಗೌಡ, 'ಕಣದಾಗೆ ಒಂದು ಚೀಲ ಪೂರ್ತಿ ರಾಗಿ ಕೊಡ್ತೀನ್ ಹೋಗ್ಲ, ಈಗ ಕಾಸಿಲ್ಲ. ಬರ ಬಂದು ಬಗಲಲ್ಲಿ ಕುಂತೈತೆ...' ಎಂದು ಕೈ ಚೆಲ್ಲಿದ್ದ. ನರಸ ಮರು ಮಾತನಾಡದೆ ಮನೆ ಕಡೆ ಹೊರಟಿದ್ದ. ಮದುವೆಗೆ ಹೋದ ಗೌಡ ಬರುವಾಗ ಮೆಟ್ಟನ್ನು ಪೇಪರಿನಲ್ಲಿ ಸುತ್ತಿ ಬ್ಯಾಗಿನಲ್ಲಿ ಇಟ್ಟುಕೊಂಡು ಬಂದಿದ್ದ. ಎರಡೂ ಕಾಲುಗಳೂ ಮೆಟ್ಟು ಕಡಿದು ಗಾಯವಾಗಿ ಊದಿಕೊಂಡಿದ್ದವು. ನೋವು ತಾಳಲಾರದೆ ಗೌಡ ತುಮಕೂರಿಗೆ ಹೋಗಿ ಇಂಜಕ್ಷನ್ ಕೊಡಿಸಿಕೊಂಡು, ಮಾತ್ರೆ ಕೊಂಡುಕೊಂಡು ಬಂದಿದ್ದ. ಒಟ್ಟು ಇನ್ನೂರೈವತ್ತು ಕೈ ಬಿಟ್ಟಿತ್ತು.

ಮಾರನೆಯ ದಿನ ಗೌಡರ ಮನೆಯ ಹತ್ತಿರ ಬಂದ ನರಸ ನಗುತ್ತ, 'ಅಲ್ಲ ಗೌಡ, ಹೊಸ ಮೆಟ್ಗೆ ಒಂದಿಷ್ಟು ಹರಳೆಣ್ಣೆ ಸವರಿ ಒಂದೆಲ್ಡ್ ಗಂಟೆ ಹಂಗೆ ಇಟ್ಟಲ್ವ ಹಾಕ್ಕಂಬೋದು...' ಎಂದಿದ್ದ.

'ಮೆಟ್ ಕಡ್ದಾಗ್ಲೆ ಅಂದ್ಕಂಡೆ ಎಲ್ಲೋ ನೀನು ಕೈ ಚಳಕ ತೋರ್ಸಿದ್ದೀಯ ಅಂತ. ಸದ್ಯ ಶುಗರ್ರು ಸ್ಟಾರ್ಟಿಂಗ್ ಪಾಯಿಂಟ್ನಾಗೆ ಐತಂತೆ. ಇಲ್ದಿದ್ರೆ ಕಾಲೇ ಊನ ಆಗೋವಂತೆ. ನನ್ನನ್ನೆ ಗಿರ್ಕಿ ಹೊಡೆಸ್ಬಿಟ್ಟಲ್ಲೊ. ಯಾಸಟ್ಗೆ ಇನ್ನೂರು ಕೊಡ್ತೀನಿ, ಒಳ್ಳೆ ಮೆಟ್ ಹೊಲ್ಕಂಡ್ ಬಂದು ಕೊಡು...' ಎಂದು ಗೌಡ ನೂರರ ಎರಡು ನೋಟನ್ನು ನರಸನ ಕೈಗಿಟ್ಟಿದ್ದ. 'ಇನ್ ನೀನು ಚಿಂತೆ ಮಾಡ್ಬೇಡ ಬಿಡು ಗೌಡ. ಹಂಗೆ ಮಲ್ಲಿಗೆ ಹೂವಿನ ಮೇಲೆ ಕಾಲಿಟ್ಟಂಗಿರ್ಬೇಕು... ಹಂಗೊಲ್ಕಂಡ್ ಬಂದು ಕೊಡ್ತೀನಿ. ಎಲ್ಲಿ, ಒಂದೆರಡು ಬೀಡಿ ತತ್ತಾ ಇಲ್ಲಿ...' ಎಂದು ಬೀಡಿ ಇಸಿದುಕೊಂಡು ಮುಸಿ ಮುಸಿ ನಗುತ್ತಾ ಮನೆಯ ಕಡೆ ಹೊರಟ. 'ಮೊದ್ಲೆ ಈ ಗ್ನಾನ ಎಲ್ಲೋಗಿತ್ತು. ಮೆರೆದಿದ್ದು ಮುರಿಲೇಬೇಕು ನೋಡು...' ಎಂದು ಗೌಡನನ್ನು ಹೆಂಡತಿ ತಗುಲಿಕೊಂಡದ್ದು ನರಸನ ಕಿವಿಗೂ ಬಿದ್ದಿತ್ತು .


## ಕೇಶವರೆಡ್ಡಿ ಹಂದ್ರಾಳ

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹಂದ್ರಾಳದವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ. ಕೆಲಕಾಲ ಉಪನ್ಯಾಸಕರಾಗಿದ್ದರು. ಆ ನಂತರ ಅವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವೃತ್ತಿ ಆರಂಭಿಸಿ, ಇತ್ತೀಚೆಗೆ ಉಪ ಆಯುಕ್ತರಾಗಿ ನಿವೃತ್ತರಾಗಿದ್ದಾರೆ. 'ಹಂದ್ರಾಳ'. 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ', 'ಕೀಟ' ಸೇರಿದಂತೆ 11 ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. 'ಒಕ್ಕಲ ಒನಪು', 'ಮರೆತ ಭಾರತ' ಅವರ ಪ್ರಬಂಧ ಸಂಕಲನಗಳಾಗಿವೆ.